ಮೆ॥ ಮಾರುತಿ ಇನ್ಫ್ರಾಸ್ಟ್ರಕ್ಚರ್ ಮತ್ತು ಡೆವಲಪರ್ಸ್ ಇವರು ವೇದಾವತಿ (ಹಗರಿ) ನದಿ ತೀರದಲ್ಲಿರುವ ಕರ್ಚೇಡು ಮರಳು ಗಣಿಗಾರಿಕೆ ವಲಯ BLY-OSB-13 ರಲ್ಲಿ ಸರ್ವೆ ನಂ-191, ಕರ್ಚೇಡು ಗ್ರಾಮ, ಬಳ್ಳಾರಿ ತಾಲ್ಲೂಕು ಮತ್ತು ಜಿಲ್ಲೆಯಲ್ಲಿ ಒಟ್ಟು 25.00 ಎಕರೆ (10.12 ಹೆಕ್ಟರ್) ಪ್ರದೇಶದಲ್ಲಿ ವರ್ಷಕ್ಕೆ 99,000 ಟನ್‌ಗಳಷ್ಟು ನದಿ ಮರಳು ಗಣಿಗಾರಿಕೆಯ ಪ್ರಸ್ತಾವನೆಯ ಪ್ರಸ್ತಾವನೆಯನ್ನು ಮಾಡುವ ಉದ್ದೇಶಕ್ಕಾಗಿ (ಯೋಜನಾ ಪ್ರದೇಶದಲ್ಲಿ) ದಿನಾಂಕ: 10-01-2022 ರಂದು ಬೆಳಿಗ್ಗೆ 11.30 ಗಂಟೆಗೆ ನಡೆದ ಪರಿಸರ ಸಾರ್ವಜನಿಕ ಸಭೆಯ ನಡುವಳಿಗಳು:-

| | | |
|---|---|---|
| ಪರಿಸರ ಕುರಿತಾದ ಸಾರ್ವಜನಿಕ ಆಲಿಕೆ ಸಭೆಯ ಸ್ಥಳ | | ಉದ್ದೇಶಿತ ಯೋಜನಾ ಸ್ಥಳ ಮೆ॥ ಮಾರುತಿ ಇನ್ಫ್ರಾಸ್ಟ್ರಕ್ಚರ್ ಮತ್ತು ಡೆವಲಪರ್ಸ್, ಕರ್ಚೇಡು ಗ್ರಾಮ, ಬಳ್ಳಾರಿ ತಾಲ್ಲೂಕು & ಜಿಲ್ಲೆ. |
| ಹಾಜರಿದ್ದ ಪರಿಸರ ಸಾರ್ವಜನಿಕ ವಿಚಾರಣಾ ಸಮಿತಿಯ ಸದಸ್ಯರುಗಳ ವಿವರ | | **ಪದನಾಮ** |
| 1. | ಪಿ.ಎಸ್.ಮಂಜುನಾಥ, ಕ.ಆ.ಸೇ(ಹಿರಿಯ ಶ್ರೇಣಿ), ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ಬಳ್ಳಾರಿ ಜಿಲ್ಲೆ | **ಅಧ್ಯಕ್ಷರು** |
| 2 | ಶ್ರೀ ಕೆ.ರಾಜು, ಹಿರಿಯ ಪರಿಸರಅಧಿಕಾರಿಗಳು (ಪ್ರಭಾರ), ಕ.ರಾ.ಮಾ.ನಿ.ಮಂ. ವಲಯ ಕಛೇರಿ, ಬಳ್ಳಾರಿ. | **ಸದಸ್ಯರು** |
| 3. | ಶ್ರೀ ಉಮಾಶಂಕರ್ ಪಿ. ಕೆ, ಪರಿಸರ ಅಧಿಕಾರಿ, ಕ.ರಾ.ಮಾ.ನಿ.ಮಂ. ಬಳ್ಳಾರಿ. | **ಸದಸ್ಯ ಸಮಾವೇಷಕರು** |
| **ಹಾಜರಿದ್ದ ಇತರ ಅಧಿಕಾರಿಗಳ ವಿವರ** | | |
| 1 | ಶ್ರೀ ಹನುಮಂತಪ್ಪ ಹೆಚ್. ಸಹಾಯಕ ಪರಿಸರ ಅಧಿಕಾರಿ, ಕ.ರಾ.ಮಾ.ನಿ.ಮಂ.ಪ್ರಾಕ, ಬಳ್ಳಾರಿ | |
| 2 | ಶ್ರೀ ಪವನ್ ಎಸ್, ಸಹಾಯಕ ಪರಿಸರ ಅಧಿಕಾರಿ, ಕ.ರಾ.ಮಾ.ನಿ.ಮಂ. ಪ್ರಾಕ, ಬಳ್ಳಾರಿ | |
| **ಹಾಜರಿದ್ದ ಇತರ ಅಧಿಕಾರಿಗಳ ವಿವರ** | | |
| 1 | ಶ್ರೀ ಕೆ.ಎಸ್.ನಾಗೇಂದ್ರಪ್ಪ, ಹಿರಿಯ ಭೂ ವಿಜ್ಞಾನಿ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಬಳ್ಳಾರಿ | |
| 2 | ಶ್ರೀ ಶ್ರೀನಿವಾಸ ಕೆ. ಭೂ ವಿಜ್ಞಾನಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಬಳ್ಳಾರಿ | |
| 3 | ಶ್ರೀ ನವೀನ್.ಜಿ. ಭೂ ವಿಜ್ಞಾನಿ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಬಳ್ಳಾರಿ | |
| 4 | ಶ್ರೀ ಕೆ. ತಿಪ್ಪೇರುದ್ರಪ್ಪ, ಗ್ರಾಮ ಪಂಚಾಯತಿ ಸೆಕ್ರರೇಟರಿ, ಬಸರಕೋಡು | |
| 5 | ಶ್ರೀ ಎಲ್. ಮೈಹಬೂಬ್ ಬಾಷಾ, ಗ್ರಾಮ ಲೆಕ್ಕಾಧಿಕಾರಿ, ಬಸರಕೋಡು | |
| ಮೆ: ಮಾರುತಿ ಇನ್ಫ್ರಾಸ್ಟ್ರಕ್ಚರ್ ಮತ್ತು ಡೆವಲಪರ್ಸ್, ಉದ್ದಿಮೆಯ ವತಿಯಿಂದ ಹಾಜರಿದ್ದ ಪ್ರತಿನಿಧಿಗಳು. | | |
| 1. | ಶ್ರೀ ರಾಮಕೃಷ್ಣ ರಾವ್, ಬಳ್ಳಾರಿ | |
| 2. | ಶ್ರೀ ಬಿ. ಬಸವರಾಜು, ಬಳ್ಳಾರಿ | |
| 3. | ಶ್ರೀ ನಾರಾಯಣ, ಹಗರಿ | |

| | |
|---|---|
| 4. | ಶ್ರೀ ಪಿ.ಜಿ. ಸುದಾಕರ್ ನಾಯ್ಕ್, ಪಿ.ಡಿ.ಹಳ್ಳಿ |
| 5 | ಶ್ರೀ ಎಸ್. ಕಂದಕೂರು, ಮೀನಹಳ್ಳಿ |
| 6 | ಶ್ರೀ ಸಚಿನ್. ಎಮ್.ಯು, ಎನ್ವಿರಾನಮೆಂಟ್ ಕನ್ಸಲ್ಟಂಟ್ |
| 7 | ಶ್ರೀ ಅರುಣ. ಆರ್. ಎನ್ವಿರಾನಮೆಂಟ್ ಕನ್ಸಲ್ಟಂಟ್ |

1. ಪರಿಸರ ಸಾರ್ವಜನಿಕ ಆಲಿಕೆ ಸಭೆಗೆ ಭಾಗವಹಿಸಿದ ಅಧಿಕಾರಿಗಳ ಸಹಿ ಇರುವ ಹಾಜರಾತಿ ವಹಿಯ ಪ್ರತಿಯನ್ನು **ಅನುಬಂಧ-1** ರಲ್ಲಿ ಲಗತ್ತಿಸಲಾಗಿದೆ.
2. ಪರಿಸರ ಸಾರ್ವಜನಿಕ ಆಲಿಕೆ ಸಭೆಗೆ ಭಾಗವಹಿಸಿದ ಸಾರ್ವಜನಿಕರ ವಿಳಾಸ ಮತ್ತು ಸಹಿ ಇರುವ ಹಾಜರಾತಿ ವಹಿಯ ಪ್ರತಿಯನ್ನು **ಅನುಬಂಧ-2** ರಲ್ಲಿ ಲಗತ್ತಿಸಲಾಗಿದೆ.

**ಪೀಠಿಕೆ**

ಮೆ: ಮಾರುತಿ ಇನ್ಫ್ರಾಸ್ಟ್ರಕ್ಚರ್ ಮತ್ತು ಡೆವಲಪರ್ಸ್, ಇವರು ವೇದಾವತಿ (ಹಗರಿ) ನದಿ ತೀರದಲ್ಲಿರುವ ಕರ್ಚೇಡು ಮರಳು ಗಣಿಗಾರಿಕೆ ವಲಯ BLY-OSB-13 ರಲ್ಲಿ ಸರ್ವೆ ನಂ-191, ಕರ್ಚೇಡು ಗ್ರಾಮ, ಬಳ್ಳಾರಿ ತಾಲ್ಲೂಕು ಮತ್ತು ಜಿಲ್ಲೆಯಲ್ಲಿ ಒಟ್ಟು 25.00 ಎಕರೆ (10.12 ಹೆಕ್ಟರ್) ಪ್ರದೇಶದಲ್ಲಿ ವರ್ಷಕ್ಕೆ 99,000 ಟನ್‌ಗಳಷ್ಟು ನದಿ ಮರಳು ಗಣಿಗಾರಿಕೆಯ ಮಾಡುವ ಉದ್ದೇಶಕ್ಕಾಗಿ ಪ್ರಸ್ತಾವನೆಯನ್ನು ಮಾಡಿರುತ್ತಾರೆ.

ಕೇಂದ್ರ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ಇವರು ಪರಿಸರ (ಸಂರಕ್ಷಣೆ) ಕಾಯ್ದೆ 1986 ಅಡಿಯಲ್ಲಿ ದಿನಾಂಕ 14.09.2006 ರಲ್ಲಿ ಜಾರಿಗೊಳಿಸಿರುವ ಪರಿಸರ ಅಘಾತ ಅಧ್ಯಯನದ ಅಧಿಸೂಚನೆ (ತಿದ್ದುಪಡಿ ದಿನಾಂಕ 01.12.2009) ರನ್ವಯ ಯೋಜನಾ ಪ್ರವರ್ತಕರು ಸದರಿ ಯೋಜನೆಗೆ ಪರಿಸರ ವಿಮೋಚನಾ ಪತ್ರ ಪಡೆಯಬೇಕಾಗಿರುತ್ತದೆ.

ಸದರಿ ಉದ್ದೇಶಿತ ಯೋಜನೆಯು ಮೇಲೆ ತಿಳಿಸಿದ ಅಧಿಸೂಚನೆ ಅಡಿಯಲ್ಲಿ ಒಳಪಡುವುದರಿಂದ ಪರಿಸರ ವಿಮೋಚನಾ ಪತ್ರ ಪಡೆಯಬೇಕಾಗಿರುತ್ತದೆ.ಆ ಮೇರೆಗೆ ಯೋಜನಾ ಪ್ರವರ್ತಕರು ಪರಿಸರ ವಿಮೋಚನಾ ಪತ್ರವನ್ನು ಪಡೆಯಲು ರಾಜ್ಯ ಮಟ್ಟದ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರ ಕರ್ನಾಟಕ ಇವರ ಸದರಿ ಯೋಜನೆಯ ಟರ್ಮ್ಸ್ ಆಫ್ ರೆಫರೆನ್ಸ್ (TOR) ಸಂಖ್ಯೆ SEIAA-798 MIN2019 ದಿನಾಂಕ : 14-05-2021 ರ ಷರತ್ತುಬದ್ಧ ನಿಬಂಧನೆಗಳ ಅನ್ವಯ ಪರಿಸರ ಸಾರ್ವಜನಿಕ ಆಲಿಕೆ ಸಭೆ ನಡೆಸುವುದು ಕಡ್ಡಾಯವಾಗಿರುತ್ತದೆ.

ಯೋಜನಾ ಪ್ರವರ್ತಕರು ಷರತ್ತುಬದ್ಧ ನಿಬಂಧನೆಗಳನ್ನು ಪಾಲಿಸುವ ಸಲುವಾಗಿ ಮೆ.ಹಾರಿಜಾನ್ ವೆಂಚರ್ಸ್, ಬೆಂಗಳೂರು ಇವರು ತಯಾರಿಸಿದ ಕ್ಷಿಪ್ರ ಪರಿಸರ ಆಘಾತ ಅಂದಾಜು ಅಧ್ಯಯನ ವರದಿ ಮತ್ತು ಕಾರ್ಯಕಾರಿ ಸಾರಾಂಶವನ್ನು ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ ಸಿದ್ಧಪಡಿಸಿ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸಿಕೊಡಲು ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬೆಂಗಳೂರು ಇವರಿಗೆ ದಿನಾಂಕ 12-10-2021 ರಂದು ಮನವಿ ಸಲ್ಲಿಸಿರುತ್ತಾರೆ.

ಯೋಜನಾ ಪ್ರವರ್ತಕರ ಸದರಿ ಮನವಿಯ ಮೇರೆಗೆ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯವತಿಯಿಂದ ಜಿಲ್ಲಾಧಿಕಾರಿಗಳು, ಬಳ್ಳಾರಿ ಇವರಿಗೆ ಪರಿಸರ ಸಾರ್ವಜನಿಕ ಆಲಿಕಾ ಸಭೆ ನಡೆಸಲು ಸೂಕ್ತ ದಿನಾಂಕ ಹಾಗೂ ಸಮಯವನ್ನು ನೀಡಲು ದಿನಾಂಕ 21-10-2021 ರಂದು ಪತ್ರದ ಮೂಲಕ ಕೋರಲಾಗಿರುತ್ತದೆ.

ಜಿಲ್ಲಾಧಿಕಾರಿಗಳು, ಬಳ್ಳಾರಿ ಜಿಲ್ಲೆ, ಬಳ್ಳಾರಿ ರವರ ಆದೇಶದನ್ವಯ ದಿನಾಂಕ: 10-01-2022 ರಂದು ಬೆಳಿಗ್ಗೆ 11.30 ಗಂಟೆಗೆ ಯೋಜನಾ ಸ್ಥಳದಲ್ಲಿ ಪರಿಸರ ಸಾರ್ವಜನಿಕ ಆಲಿಕೆ ಸಭೆ ನಡೆಸಲು ಸಮ್ಮತಿ ಸೂಚಿಸಿರುತ್ತಾರೆ. ಈ ಸಭೆಗೆ ಪೂರಕವಾಗಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ರಾಜ್ಯ ಮಟ್ಟದ ಪ್ರಮುಖ ದಿನ ಪತ್ರಿಕೆಗಳಾದ ವಿಜಯ ಕರ್ನಾಟಕ (ಕನ್ನಡ) ಹಾಗೂ ದಿ ಹಿಂದೂ (ಆಂಗ್ಲ) ಗಳಲ್ಲಿ ದಿನಾಂಕ 10-12-2021 ರಂದು ಪತ್ರಿಕಾ ಪ್ರಕಟಣೆ ಬಳ್ಳಾರಿ ಜಿಲ್ಲೆಯ ಸ್ಥಳೀಯ ದಿನಪತ್ರಿಕೆಯಾದ "ಈ ನಮ್ಮ ಕನ್ನಡ ನಾಡು" ಪತ್ರಿಕೆಯಲ್ಲಿ ಸಹ ದಿನಾಂಕ: 12-12-2021 ರಂದು ಪರಿಸರ ಸಾರ್ವಜನಿಕ ಆಲಿಕೆ ಸಭೆ ಕುರಿತಾದ ಪ್ರಕಟಣೆಯನ್ನು ನೀಡಲಾಗಿರುತ್ತದೆ. ಈ ಯೋಜನೆಗೆ ಸಂಬಂಧಿಸಿದಂತೆ ಸಾರ್ವಜನಿಕರ ಅನಿಸಿಕೆ/ಆಕ್ಷೇಪಣೆ/ಸೂಚನೆ/ಸಲಹೆ/ಅಭಿಪ್ರಾಯಗಳನ್ನು ಲಿಖಿತವಾಗಿ 30 ದಿನಗಳ ಒಳಗೆ ಸಲ್ಲಿಸಲು ಕೋರಲಾಗಿತ್ತು.

ಸದರಿ ಯೋಜನೆಗೆ ಸಂಬಂಧಿಸಿದಂತೆ ಯೋಜನಾ ಪ್ರವರ್ತಕರು ಸಲ್ಲಿಸಿದ್ದ ಕ್ಷಿಪ್ರ ಪರಿಸರ ಆಘಾತ ಅಂದಾಜು ಅಧ್ಯಯನದ ವರದಿ ಮತ್ತು ಕಾರ್ಯಕಾರಿ ಸಾರಂಶದ ಕನ್ನಡ ಮತ್ತು ಆಂಗ್ಲ ಭಾಷೆಯ ಪ್ರತಿಗಳನ್ನು ಈ ಕೆಳಕಂಡ ಸ್ಥಳಗಳಲ್ಲಿ ಸಾರ್ವಜನಿಕರ ಪರಾಮರ್ಶೆಗೆ ಇಡಲಾಗಿತ್ತು.

- ಮಾನ್ಯ ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬಳ್ಳಾರಿ,
- ಜಿಲ್ಲಾ ಪಂಚಾಯತ್, ಕಾರ್ಯಾಲಯ ಬಳ್ಳಾರಿ.
- ಜಿಲ್ಲಾ ಕೈಗಾರಿಕಾ ಕೇಂದ್ರ, ಬಳ್ಳಾರಿ.
- ತಾಲ್ಲೂಕು ಕಛೇರಿ, ಬಳ್ಳಾರಿ.
- ತಾಲ್ಲೂಕು ಪಂಚಾಯತಿ ಕಾರ್ಯಾಲಯ, ಬಳ್ಳಾರಿ
- ಗ್ರಾಮ ಪಂಚಾಯತಿ ಕಾರ್ಯಾಲಯ, ಬಸರಕೋಡ ಬಳ್ಳಾರಿ ತಾಲ್ಲೂಕು&ಜಿಲ್ಲೆ
- ವಿಭಾಗಿಯ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬಳ್ಳಾರಿ.
- ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬಳ್ಳಾರಿ.
- ರಾಜ್ಯ ಮಟ್ಟದ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರ ಕರ್ನಾಟಕ, ಬೆಂಗಳೂರು-560001
- ಸಹಾಯ ಕೇಂದ್ರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ನೆಲ ಅಂತಸ್ತು, ನಂ. 49, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು-560001

ಜಿಲ್ಲಾಧಿಕಾರಿಗಳು, ಬಳ್ಳಾರಿ ಜಿಲ್ಲೆ, ಬಳ್ಳಾರಿ ರವರ ಆದೇಶದನ್ವಯ ದಿನಾಂಕ: 10-01-2022 ರಂದು ಬೆಳಿಗ್ಗೆ 11.30 ಗಂಟೆಗೆ ಯೋಜನಾ ಸ್ಥಳದಲ್ಲಿ ಪರಿಸರ ಸಾರ್ವಜನಿಕ ಆಲಿಕೆ ಸಭೆ ನಡೆಸಲು ಸಮ್ಮತಿ ಸೂಚಿಸಿರುತ್ತಾರೆ. ಈ ಸಭೆಗೆ ಪೂರಕವಾಗಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ರಾಜ್ಯ ಮಟ್ಟದ ಪ್ರಮುಖ ದಿನ ಪತ್ರಿಕೆಗಳಾದ ವಿಜಯ ಕರ್ನಾಟಕ (ಕನ್ನಡ) ಹಾಗೂ ದಿ ಹಿಂದೂ (ಆಂಗ್ಲ) ಗಳಲ್ಲಿ ದಿನಾಂಕ 10-12-2021 ರಂದು ಪತ್ರಿಕಾ ಪ್ರಕಟಣೆ ಬಳ್ಳಾರಿ ಜಿಲ್ಲೆಯ ಸ್ಥಳೀಯ ದಿನಪತ್ರಿಕೆಯಾದ "ಈ ನಮ್ಮ ಕನ್ನಡ ನಾಡು" ಪತ್ರಿಕೆಯಲ್ಲಿ ಸಹ ದಿನಾಂಕ: 12-12-2021 ರಂದು ಪರಿಸರ ಸಾರ್ವಜನಿಕ ಆಲಿಕೆ ಸಭೆ ಕುರಿತಾದ ಪ್ರಕಟಣೆಯನ್ನು ನೀಡಲಾಗಿರುತ್ತದೆ. (ಪ್ರತಿಯನ್ನು **ಅನುಬಂಧ-3** ರಲ್ಲಿ ಲಗತ್ತಿಸಲಾಗಿದೆ) ಈ ಯೋಜನೆಗೆ ಸಂಬಂಧಿಸಿದಂತೆ ಸಾರ್ವಜನಿಕರ ಅನಿಸಿಕೆ/ಆಕ್ಷೇಪಣೆ/ಸೂಚನೆ/ ಸಲಹೆ/ಅಭಿಪ್ರಾಯಗಳನ್ನು ಲಿಖಿತವಾಗಿ 30 ದಿನಗಳ ಒಳಗೆ ಸಲ್ಲಿಸಲು ಕೋರಲಾಗಿತ್ತು.

ಸದರಿ ಪರಿಸರ ಸಾರ್ವಜನಿಕ ಸಭೆಯ ಕುರಿತು ಮೇಲೆ ತಿಳಿಸಿದ ಎಲ್ಲಾ ಇಲಾಖೆಯವರಿಗೆ ಪರಿಸರ ಸಾರ್ವಜನಿಕ ಸಭೆಯ ದಿನಾಂಕ: 10-01-2022 ರಂದು ನಡೆಯುತ್ತಿರುವ ಕುರಿತು ಹಾಗೂ ಪತ್ರಿಕಾ ಪ್ರಕಟಣೆ ಬಗ್ಗೆ ಮಾಹಿತಿಯನ್ನು ದಿನಾಂಕ:13-12-2021 ರಂದು ಪತ್ರದ ಮೂಲಕ ತಿಳಿಸಲಾಗಿರುತ್ತದೆ.

ಯೋಜನಾ ಪ್ರದೇಶದ ಸುತ್ತಮುತ್ತಲಿನ ಸಾರ್ವಜನಿಕರಿಗೆ ಉದ್ದೇಶಿತ ವಿಸ್ತರಣಾ ಘಟಕದ ಕುರಿತು ಹಾಗು ಸಾರ್ವಜನಿಕ ಆಲಿಕಾ ಸಭೆ ನಡೆಯುವ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಉದ್ದಿಮೆಯ ಸುತ್ತಮುತ್ತಲಿನ ಗ್ರಾಮಗಳಾದ ಬಾಣಾಪುರ, ಕರ್ಚೇಡು, ಬಸರಕೋಡ, ವಣೇನೂರು, ಹಡ್ಲಿಗಿ, ಬೆಣಕಲ್ಲು, ಸಿಂದವಾಳ, ಗ್ರಾಮಗಳಲ್ಲಿ ಕರ ಪತ್ರಗಳನ್ನು ಹಂಚಲಾಗಿದ್ದು ಮತ್ತು ಧ್ವನಿ ವರ್ದಕಗಳ ಮೂಲಕವು ಸಹ ಪ್ರಚಾರವನ್ನು ದಿನಾಂಕ 07-01-2022 ರಂದು ಮಾಡಲಾಗಿರುತ್ತದೆ. (ಛಾಯಾ ಚಿತ್ರಗಳನ್ನು **ಅನುಬಂಧ-4**ರಲ್ಲಿ ಲಗತ್ತಿಸಿದೆ)

ಮಾನ್ಯ ಜಿಲ್ಲಾಧಿಕಾರಿಗಳು, ಬಳ್ಳಾರಿ ರವರ ಅಧಿಕೃತ ಜ್ಞಾಪನಾ ಪತ್ರದ ದಿನಾಂಕ :07-01-2022 ರ ಅನ್ವಯ ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ಬಳ್ಳಾರಿ ರವರಿಗೆ ಅಧಿಕಾರ ನೀಡಿ ದಿನಾಂಕ : 10-01-2022 ರಂದು ನಡೆಯುವ ಪರಿಸರ ಆಲಿಕೆ ಸಭೆಯನ್ನು ನಡೆಸಲು ಆದೇಶಿಸಿರುತ್ತಾರೆ. ಸದರಿ ಜ್ಞಾಪನಾ ಪತ್ರದ ಪ್ರತಿಯನ್ನು **ಅನುಬಂಧ-5** ರಂತೆ ಲಗತ್ತಿಸಿದೆ.

ಮೇಲೆ ತಿಳಿಸಿದ್ದ ಅಧಿಸೂಚನೆಯಲ್ಲಿನ ಎಲ್ಲಾ ವಿಧಿ-ವಿಧಾನಗಳನ್ನು ಕ್ರಮಬದ್ಧವಾಗಿ ನಿಯಮಾನುಸಾರ ಪಾಲಿಸಿ ದಿನಾಂಕ 10-01-2022 ರಂದು ಬೆಳಿಗ್ಗೆ 11.30 ಗಂಟೆಗೆ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಮಾನ್ಯ ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ಬಳ್ಳಾರಿ ಇವರ ಅಧ್ಯಕ್ಷತೆಯಲ್ಲಿ ಉದ್ದೇಶಿತ ಯೋಜನಾ ಸ್ಥಳವಾದ ಮೆ: ಮಾರುತಿ ಇನ್ಫ್ರಾಸ್ಟ್ರಕ್ಚರ್ ಮತ್ತು ಡೆವಲಪರ್ಸ್, ಕರ್ಚೇಡು ಗ್ರಾಮ, ಬಳ್ಳಾರಿ ತಾಲ್ಲೂಕು & ಜಿಲ್ಲೆಯಲ್ಲಿ ಪ್ರಾರಂಭಿಸಲಾಯಿತು.

**ಸಭೆಯ ನಡವಳಿಗಳು**

ಸದಸ್ಯ ಸಮಾವೇಷಕರು ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ, ಬಳ್ಳಾರಿ ಪ್ರಾದೇಶಿಕ ಕಛೇರಿಯ ಪರಿಸರ ಅಧಿಕಾರಿಗಳಾದ ಶ್ರೀ ಉಮಾಶಂಕರ್ ಪಿ.ಕೆ. ಅವರು ಶ್ರೀ ಪಿ.ಎಸ್.ಮಂಜುನಾಥ, ಕ.ಆ.ಸೇ(ಹಿರಿಯ ಶ್ರೇಣಿ), ಅಪರಜಿಲ್ಲಾಧಿಕಾರಿಗಳು ಹಾಗೂ ಅಪರಜಿಲ್ಲಾ ದಂಡಾಧಿಕಾರಿಗಳು ಮತ್ತು ಹಿರಿಯ ಪರಿಸರ ಅಧಿಕಾರಿ ಶ್ರೀ ಕೆ.ರಾಜು ಅವರಿಗೆ ಸ್ವಾಗತ ಕೋರಿದರು. ಮೆ: ಮಾರುತಿ ಇನ್ಫ್ರಾಸ್ಟ್ರಕ್ಚರ್ ಮತ್ತು ಡೆವಲಪರ್ಸ್, ಕಂಪನಿಯ ಪ್ರತಿನಿಧಿಗಳಿಗೆ, ಅಧಿಕಾರಿಗಳಿಗೆ, ಎಲ್ಲಾ ಸಾರ್ವಜನಿಕರಿಗೆ, ಪತ್ರಕರ್ತರಿಗೆ ಹಾಗೂ ಇತರೆ ಇಲಾಖೆಯ ಅಧಿಕಾರಿಗಳಿಗೆ ಸ್ವಾಗತ ಕೋರಿದರು ಹಾಗೂ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ಕೇಂದ್ರ ಸರ್ಕಾರ, ಇವರು ಪರಿಸರ(ಸಂರಕ್ಷಣೆ)ಕಾಯ್ದೆ, 1986 ರಡಿಯಲ್ಲಿ ದಿನಾಂಕ : 14-09-2006 ರಲ್ಲಿ ಜಾರಿಗೊಳಿಸಿರುವ ಪರಿಸರ ಅಘಾತ ಅಧ್ಯಯನದ ಅಧಿಸೂಚನೆ ಬಗ್ಗೆ ಸಂಕ್ಷಿಪ್ತವಾಗಿ ವಿವರಣೆ ನೀಡಿದರು. ಸದರಿ ಯೋಜನೆಗೆ ಸಂಬಂಧಪಟ್ಟ ಪ್ರಾಧಿಕಾರದಿಂದ ಪರಿಸರ ವಿಮೋಚನಾ ಪತ್ರ ಪಡೆಯಬೇಕಾಗಿರುವ ವಿಷಯವನ್ನು ಸಹ ಸಭೆಗೆ ತಿಳಿಸಿದರು. ಸಾರ್ವಜನಿಕ ಪರಿಸರ ಆಲಿಕೆ ಸಭೆಯ ಪೂರ್ವದಲ್ಲಿ ನಿಯಮಾನುಸಾರ ಕೈಗೊಂಡ ಕ್ರಮಗಳ ಬಗ್ಗೆ ವಿವರಣೆಯನ್ನು ನೀಡಿದರು ಹಾಗೂ ಸಾರ್ವಜನಿಕ ಆಲಿಕೆಯ ಸಭೆಯ ಅಧ್ಯಕ್ಷತೆಯನ್ನು ವಹಿಸುವಂತೆ ಮತ್ತು ಸಭೆಯನ್ನು ನಡೆಸಿಕೊಡುವಂತೆ ಮಾನ್ಯ ಅಪರ ಜಿಲ್ಲಾಧಿಕಾರಿಗಳನ್ನು ಕೋರಿದರು.

ಶ್ರೀ ಪಿ.ಎಸ್.ಮಂಜುನಾಥ, ಕ.ಆ.ಸೇ(ಹಿರಿಯ ಶ್ರೇಣಿ), ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ಬಳ್ಳಾರಿ ರವರು ಸಭೆಯನ್ನು ಉದ್ದೇಶಿಸಿ ಯೋಜನೆಗೆ ಪರಿಸರ ಸಾರ್ವಜನಿಕ ವಿಚಾರಣೆಯನ್ನು ನಡೆಸುವುದು ಕಡ್ಡಾಯವಾಗಿದೆ ಎಂದು ತಿಳಿಸಿದರು. ಪರಿಸರ ಅಘಾತ ಅಧ್ಯಯನ ಅಧಿಸೂಚನೆ ದಿನಾಂಕ: 14-09-2006 ರ ಬಗ್ಗೆ ವಿವರವಾದ ಮಾಹಿತಿಯನ್ನು ಸಭೆಯಲ್ಲಿದ್ದ ಸಾರ್ವಜನಿಕರಿಗೆ ತಿಳಿಸಿದರು ಹಾಗೂ ಪರಿಸರ ಸಾರ್ವಜನಿಕ ವಿಚಾರಣೆಯ ಅಗತ್ಯತೆಯನ್ನು ಸಂಕ್ಷಿಪ್ತವಾಗಿ ವಿವರಿಸಿದರು.

ಪ್ರಸ್ತಾವಿತ ಯೋಜನೆಯ ಪವರ್ ಪಾಯಿಂಟ್ ಪ್ರಸ್ತುತಿಯನ್ನು ನೀಡುವಂತೆ ಅವರು ಯೋಜನಾ ಪ್ರತಿಪಾದಕರಿಗೆ ಮಾಹಿತಿ ನೀಡಿದರು, ಅಲ್ಲಿ ವಿಚಾರಣೆಗೆ ಹಾಜರಿದ್ದ ಸಾರ್ವಜನಿಕರು ಪರಿಸರ ಸಮಸ್ಯೆಗಳ ಕುರಿತು ಉದ್ದೇಶಿತ ಯೋಜನೆಗೆ ತಮ್ಮ ಎಲ್ಲಾ ಅಭಿಪ್ರಾಯ/ಸಲಹೆ/ಪತ್ರಗಳನ್ನು ಯೋಜನೆಯ ಬಗ್ಗೆ ಲಿಖಿತ ಅಥವಾ ಮೌಖಿಕವಾಗಿ ಪ್ರಸ್ತುತಪಡಿಸುವಂತೆ ವಿನಂತಿಸಿಕೊಂಡರು. ಈ ನಡವಳಿಯು ಲಿಖಿತ ದಾಖಲೆ ಮತ್ತು ವಿಡಿಯೋಗ್ರಾಫಿ ಎರಡನ್ನು ಒಳಗೊಂಡಿದೆ ಎಂದು ಸಭೆಗೆ ತಿಳಿಸಿದರು.

ಅದರಂತೆ, ಮೆ: ಮೆ: ಮಾರುತಿ ಇನ್ಫ್ರಾಸ್ಟ್ರಕ್ಚರ್ ಮತ್ತು ಡೆವಲಪರ್ಸ್, ಕಂಪನಿ ಪರವಾಗಿ ಶ್ರೀ ಸಚಿನ್ ಮೆ.ಹಾರಿಜಾನ್ ವೆಂಚರ್ಸ್, ಬೆಂಗಳೂರು ರವರು ತಯಾರಿಸಿರುವ ಕ್ರಿಯಾತ್ಮಕ ಸಾರಾಂಶದಲ್ಲಿ ತಿಳಿಸಿರುವ ಕ್ರಮಗಳು, ಶಬ್ಧದ ಮಟ್ಟದ ಸುಧಾರಿತ ಕ್ರಮಗಳು, ನೀರಿನ ಗುಣಮಟ್ಟ ಸುಧಾರಿತ ಕ್ರಮಗಳು, ಗಾಳಿಯ ಗುಣಮಟ್ಟ ಸುಧಾರಿತ ಕ್ರಮಗಳು, ಮಣ್ಣಿನ ಗುಣಮಟ್ಟದ ಸುಧಾರಿತ ಕ್ರಮಗಳು, ಜಮೀನಿನ ಬಳಕೆ, ಸಸ್ಸೀಕರಣ ಪೋಟೊಗಳು, ಗಣಿ ಗುತ್ತಿಗೆ ಪ್ರದೇಶದೊಳಗಿನ ರಕ್ಷಣಾತ್ಮಕ ಕ್ರಮಗಳ ಪೋಟೊ, ಪರಿಸರ ರಕ್ಷಣೆಯ ಬಜೆಟ್ ಚಟುವಟಿಕೆಗಳನ್ನೊಳಗೊಂಡ ವಿವರಗಳನ್ನು ಪವರ್ ಪಾಯಿಂಟ್ ಮೂಲಕ ಸಭೆಗೆ ಮಂಡಿಸಿದರು.

ಸಭೆಯ ಅಧ್ಯಕ್ಷರು ಈ ಉದ್ದೇಶಿತ ಯೋಜನೆಯ ಬಗ್ಗೆ ಪರಿಸರ ಕುರಿತಾಗಿ ಯಾವುದೇಸಲಹೆ/ಅನಿಸಿಕೆ/ಅಭಿಪ್ರಾಯ/ಸೂಚನೆಗಳು ಯಾವುದಾದರೂ ಇದ್ದಲ್ಲಿ ಸಭೆಗೆ ಮಂಡಿಸುವಂತೆ ಸಭೆಯಲ್ಲಿ ನೆರೆದಿದ್ದ ಸಾರ್ವಜನಿಕರನ್ನು ಕೋರಿದರು.

ಆಮೇರೆಗೆ ಸಾರ್ವಜನಿಕರು ಯೋಜನೆಯ ಬಗ್ಗೆ ತಮ್ಮ ಸಲಹೆ/ಅನಿಸಿಕೆ/ಅಭಿಪ್ರಾಯ/ಸೂಚನೆಗಳನ್ನು ಈ ಕೆಳಕಂಡಂತೆ ಮಂಡಿಸಿದರು.

1. **ಶ್ರೀ ರವಿ ಕುಮಾರ, ಕರ್ಚೇಡು ಗ್ರಾಮ** – ರವರು ಮಾತನಾಡುತ್ತಾ, ಕರ್ಚೇಡು ಗ್ರಾಮದಲ್ಲಿ ಮರಳು ಗಣಿಗಾರಿಕೆ ಮಾಡುವುದರಿಂದ ಬೋರ್‌ವೆಲ್‌ಗಳಿಗೆ ಸಮಸ್ಯೆ ಉಂಟಾಗುತ್ತದೆ ಎಂದರು. ಕರ್ಚೇಡು ಗ್ರಾಮದ ರೈತರು ಸದರಿ ನದಿಯಂಚಿನಲ್ಲಿ ಕೃಷಿ ಚಟುವಟಿಕೆಗಾಗಿ ಬೋರ್‌ವೆಲ್‌ಗಳನ್ನು ಅಳವಡಿಸಿರುತ್ತಾರೆ. ಮರಳ ಗಣಿಗಾರಿಕೆಯಿಂದ ಅವುಗಳಿಗೆ ತೊಂದರೆಯಾಗುತ್ತದೆ ಎಂದರು. ಅಲ್ಲದೇ ಈ ಪ್ರದೇಶ ಗ್ರಾಮಸ್ಥರಿಗೆ ಕಟ್ಟಡ ಕಟ್ಟಲು ಮರಳಿನ ಕೊರತೆ ಉಂಟಾಗುತ್ತದೆ ಎಂದು ತಿಳಿಸಿದರು. ಗ್ರಾಮದಲ್ಲಿ ನಿರುದ್ಯೋಗ ಸಮಸ್ಯಗಳು ಸಹ ಇರುವುದಾಗಿ ತಿಳಿಸಿದರು. ಅ ಅಂಶಗಳನ್ನು ಪರಿಶೀಲಿಸುವಂತೆ ಸಭೆಯಲ್ಲಿ ಕೋರಿದರು.
2. **ಶ್ರೀ** ಜಿ.ನಾಗರಾಜಗೌಡ, ಕರ್ಚೇಡು ಗ್ರಾಮ– ರವರು ಮಾತನಾಡುತ್ತಾ, ಬಸರಕೋಡು ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿರುವ ಕರ್ಚೇಡು ಗ್ರಾಮದಲ್ಲಿರುವ ರೈತರ ಜಮೀನುಗಳಲ್ಲಿ ಪ್ರಸ್ತುತ 10–15 ಅಡಿಯಲ್ಲಿ ಬೋರ್‌ವೆಲ್ ಕೊರೆದರೆ ನೀರು ಸಿಗುತ್ತಿದ್ದು, ಇಲ್ಲಿ ಮರಳು ಗಣಿಗಾರಿಕೆಗೆ ಅವಕಾಶ ನೀಡಿದರೆ 150–200 ಅಡಿಗಳಷ್ಟು ಬೋರ್‌ವೆಲ್ ಕೊರೆದರೂ ನೀರು ಲಭ್ಯವಾಗದಂತಹ ಪರಿಸ್ಥಿತಿ

ನಿರ್ಮಾಣವಾಗುತ್ತದೆ. ಆದರಿಂದ ಈ ಪ್ರದೇಶದಲ್ಲಿ ಮರಳು ಗಣಿಗಾರಿಕೆಗೆ ಅವಕಾಶ ನೀಡಬಾರದು ಎಂದು ಮನವಿ ಮಾಡಿದರು. ಒಂದು ವೇಳೆ ಈ ಪ್ರದೇಶದಲ್ಲಿ ಮರಳು ಗಣಿಗಾರಿಕೆಗೆ ಅವಕಾಶ ನೀಡಿದರೆ ಮುಂದಿನ ದಿನಗಳಲ್ಲಿ ಇದರ ವಿರುದ್ಧ ಧರಣಿ ನಡೆಸುವುದಾಗಿ ತಿಳಿಸಿದರು.

3. **ಶ್ರೀ ತಿಪ್ಪೆಸ್ವಾಮಿ, ಕರ್ಚೇಡು ಗ್ರಾಮ–** ರವರು ಮಾತನಾಡುತ್ತಾ ಕರ್ಚೇಡು ಗ್ರಾಮದಲ್ಲಿರುವವರು ಬಡ ರೈತರಾಗಿದ್ದು ಜೀವನ ನಿರ್ವಹಣೆಗಾಗಿ ವ್ಯವಸಾಯವನ್ನೆ ನಂಬಿದ್ದು ಇಂತಹ ಪರಿಸ್ಥಿತಿಯಲ್ಲಿ ಕರ್ಚೇಡು ಗ್ರಾಮದಲ್ಲಿ ಮರಳು ಗಣಿಗಾರಿಕೆಗೆ ಅವಕಾಶ ನೀಡಿದರೆ ರೈತರಿಗೆ ತುಂಬಾ ತೊಂದರೆಯಾಗುವುದರಿಂದ ಮರಳು ಗಣಿಗಾರಿಕೆಗೆ ಅವಕಾಶ ನೀಡಬಾರದೆಂದು ಮನವಿ ಮಾಡಿದರು.
4. **ಶ್ರೀ ಪ್ರಕಾಶ್, ಕರ್ಚೇಡು ಗ್ರಾಮ–** ರವರು ಮಾತನಾಡುತ್ತಾ ಹತ್ತಿರದಲ್ಲಯೇ ಇರುವ ವೇದಾವತಿ ನದಿಯನ್ನು ಕುಡಿಯುವ ನೀರಿಗಾಗಿ ಕರ್ಚೇಡು ಗ್ರಾಮಸ್ಥರು ಅವಲಂಬಿಸಿದ್ದು ಇಲ್ಲಿ ಮರಳು ಗಣಿಗಾರಿಕೆಗೆ ಅವಕಾಶ ನೀಡಿದರೆ ಅಂತರ್ಜಲ ಮಟ್ಟದಲ್ಲಿ ಕುಸಿತ ಉಂಟಾಗುತ್ತದೆ ಎಂದರು. ಕುಡಿಯುವ ನೀರಿನ ಸಮಸ್ಯೆ ಉಂಟಾಗುತ್ತದೆ ಅಲ್ಲದೇ ನದಿಯ ಪ್ರದೇಶದಲ್ಲಿ ಅಪರೂಪದ ಪಕ್ಷಿಗಳಿದ್ದು ಅವುಗಳಿಗೆ ತೊಂದರೆಯಾಗುತ್ತದೆ ಎಂದರು. ರೈತರು ಕೃಷಿಯನ್ನೆ ನಂಬಿಕೊಂಡಿದ್ದು ಕೃಷಿ ಚಟುವಟಿಕೆಗೆ ಬೋರ್‌ವೆಲ್‌ಗಳನ್ನು ಆಶ್ರಯಿಸಿಕೊಂಡಿದ್ದು ಮರಳು ಗಣಿಗಾರಿಕೆಯಿಂದ ಬೋರ್‌ವೆಲ್‌ಗಳಿಗೆ ಹಾನಿಯಾಗುತ್ತದೆ ಎಂದರು. ಆದುದರಿಂದ ಮರಳು ಗಣಿಗಾರಿಕೆಯನ್ನು ತಡೆ ಹಿಡಿಯುವಂತೆ ಮನವಿ ಮಾಡಿದರು.
5. **ಶ್ರೀ ಮಲ್ಲಿಕಾರ್ಜುನ, ಕರ್ಚೇಡು ಗ್ರಾಮ–** ರವರು ಮಾತನಾಡುತ್ತಾ, ತಮ್ಮ ಗ್ರಾಮವು ಚಿಕ್ಕ ಗ್ರಾಮವಾಗಿದ್ದು, ಇಲ್ಲಿ ಬಡ ಜನರೇ ಹೆಚ್ಚಾಗಿ ವಾಸಿಸುತ್ತಿದ್ದಾರೆ ಎಂದರು. ಕುಡಿಯುವ ನೀರಿಗಾಗಿ ವೇದಾವತಿ ನೀರನ್ನು ಅವಲಂಬಿಸಿದ್ದು ಮರಳು ಗಣಿಗಾರಿಕೆಗೆ ಅವಕಾಶ ನೀಡಿದರೆ ಕುಡಿಯುವ ನೀರು ಉಪ್ಪಾಗುವ ಸಂಭವವಿದ್ದು ಮರಳು ಗಣಿಗಾರಿಕೆಗೆ ಅವಕಾಶ ನೀಡದಂತೆ ಮನವಿ ಮಾಡಿದರು.
6. **ಶ್ರೀ ವೆಂಕಟೇಶ್ವರಲು, ಆದೋನಿ ಗ್ರಾಮ–** ರವರು ಮಾತನಾಡುತ್ತಾ, ಕರ್ಚೇಡು ಗ್ರಾಮದಲ್ಲಿ ಮರಳು ಗಣಿಗಾರಿಕೆ ನಡೆಸಲು ಅನುಮತಿ ನೀಡುವಂತೆ ಉದ್ದಿಮೆಯ ಪರವಾಗಿ ಬೆಂಬಲ ಪತ್ರವನ್ನು ಸಲ್ಲಿಸಿದರು.
7. **ಶ್ರೀ ಶೇಖಪ್ಪ, ಕರ್ಚೇಡು ಗ್ರಾಮ–** ರವರು ಮಾತನಾಡುತ್ತಾ, ಒಂದು ಲಾರಿಗೆ 20–30 ಟನ್ ನಷ್ಟು ಮರಳನ್ನು ಹಾಕಿ ಸಾಗಿಸುವುದರಿಂದ ಗ್ರಾಮದಲ್ಲಿರುವ ರಸ್ತೆಗಳು ಹಾಳಾಗುತ್ತವೆ, ಮನೆಗಳಿಗೆ ಹಾನಿಯಾಗುತ್ತದೆ ಮತ್ತು ವಾಹನ ದಟ್ಟಣೆಯಿಂದ ಮಕ್ಕಳು ರಸ್ತೆಯಲ್ಲಿ ಓಡಾಡುವುದು, ಕಷ್ಟವಾಗುತ್ತದೆ ಎಂದರು. ಸಾಕು ಪ್ರಾಣಿಗಳು ಸಹ ಓಡಾಡಲು ತೊಂದರೆಯಾಗುವುದರಿಂದ ಮರಳು ಗಣಿಗಾರಿಕೆಗೆ ಅವಕಾಶ ನೀಡಬಾರದೆಂದು ಮನವಿ ಮಾಡಿದರು.
8. **ಶ್ರೀ ಗಾದಿಗಪ್ಪ, ಹಿರೇಹಟ್ಟಿ ಗ್ರಾಮ ಪಂಚಾಯತಿ ಸದಸ್ಯರು–** ರವರು ಮಾತನಾಡುತ್ತಾ, ಗ್ರಾಮ ಪಂಚಾಯತಿ ಅಭಿವೃದ್ದಿಗೆ ಅನುದಾನದ ಕೊರತೆ ಇದ್ದು, ಇಲ್ಲಿ ಮರಳು ಗಣಿಗಾರಿಕೆಗೆ ಅವಕಾಶ ನೀಡುವುದರಿಂದ ರಾಜಧನ ಸಂಗ್ರಹವಾಗಿ ಪಂಚಾಯತಿಯು ಅಭಿವೃದ್ಧಿಯಾಗುತ್ತದೆ ಎಂದರು. ಮರಳು ಗಣಿಗಾರಿಕೆಯಿಂದ 10–15 ಜನರಿಗೆ ತೊಂದರೆಯಾಗಬಹುದು ಆದರೆ ಮರಳು ಗಣಿಗಾರಿಕೆಗೆ ಅವಕಾಶ ನೀಡುವುದರಿಂದ ಡಿ.ಎಂ.ಎಫ್. ಅನುಧಾನ ಬಿಡುಗಡೆಯಾಗುವುದರಿಂದ ತಮ್ಮ ಹಳ್ಳಿಯ ಅಭಿವೃದ್ದಿಯಾಗುತ್ತದೆ ಎಂದರು. ಕಾಮಗಾರಿಗಳು, ಚರಂಡಿ ವ್ಯವಸ್ಥೆ, ಜಮೀನುಗಳಿಗೆ ತೆರಳಲು ಇರುವ ರಸ್ತೆಗಳ ಅಭಿವೃದ್ದಿಯಾಗುವುದರಿಂದ ಸದರಿ ಮರಳು ಗಣಿಗಾರಿಕೆಗೆ ತಮ್ಮ ಮತ್ತು ಗ್ರಾಮ ಪಂಚಾಯತಿ ಸದಸ್ಯರುಗಳ ಸಹಮತ ಇರುವುದಾಗಿ ತಿಳಿಸಿದರು.
9. **ಶ್ರೀ ಪಕೀರಪ್ಪ, ಕರ್ಚೇಡು ಗ್ರಾಮ–** ರವರು ಮಾತನಾಡುತ್ತಾ ಗ್ರಾಮ ಪಂಚಾಯತಿ ಸದಸ್ಯರು ಹೇಳಿದಂತೆ ಮರಳು ಗಣಿಗಾರಿಕೆ ಅವಕಾಶ ನೀಡುವುದರಿಂದ ಪಂಚಾಯತಿ ಅಭಿವೃದ್ದಿಯಾಗುವುದಾದರೆ ತಮ್ಮ

ಗ್ರಾಮದ ವ್ಯಾಪ್ತಿಯಲ್ಲಿಯೇ ಮರಳು ಗಣಿಗಾರಿಕೆಗೆ ಅವಕಾಶ ಕಲ್ಪಿಸಿ ಅಭಿವೃದ್ದಿ ಹೊಂದುವಂತೆ ಕೋರಿದರು. ಅಲ್ಲಿಯೂ ನದಿ ಇದೆ ಅಲ್ಲಿಯೇ ಮರಳು ಗಣಿಗಾರಿಕೆಗೆ ಅವಕಾಶ ನೀಡುವಂತೆ ಕೋರಿದರು. ತಮ್ಮದು ಸಣ್ಣ ಗ್ರಾಮವಾಗಿದ್ದು ಬಡತನದಿಂದ ಕೂಡಿದ್ದು ಕುಡಿಯುವ ನೀರಿಗಾಗಿ ವೇದಾವತಿ ನದಿಯನ್ನೆ ಅವಲಂಬಿಸಿದ್ದು ಕರ್ಚೇಡು ಗ್ರಾಮದಲ್ಲಿ ಮರಳು ಗಣಿಗಾರಿಕೆಗೆ ಅವಕಾಶ ನೀಡುವುದರಿಂದ ಕುಡಿಯುವ ನೀರು ಉಪ್ಪಾಗುತ್ತದೆ ಎಂದರು. ಸುಮಾರು 80-100 ಪಂಪಸೆಟ್‌ಗಳನ್ನು ಅಳವಡಿಸುವ ಮೂಲಕ ರೈತರು ನೀರಿಗಾಗಿ ನದಿಯನ್ನೆ ಅವಲಂಬಿಸಿದ್ದು ಮರಳು ಗಣಿಗಾರಿಕೆಗೆ ಅವಕಾಶ ನೀಡಿದರೆ ರೈತರಿಗೆ ತೊಂದರೆಯಾಗುತ್ತದೆ ಆದ್ದರಿಂದ ಮರಳು ಗಣಿಗಾರಿಕೆಗೆ ಅವಕಾಶ ನೀಡದಂತೆ ಮನವಿ ಮಾಡಿದರು.

10. **ಶ್ರೀ ಎ. ಗಾದಿಲಿಂಗಪ್ಪ, ಬಸರಕೋಡು ಗ್ರಾಮ ಪಂಚಾಯತಿ ಸದಸ್ಯರು**- ರವರು ಮಾತನಾಡುತ್ತಾ, ಮರಳ ಗಣಿಗಾರಿಕೆ ಅವಕಾಶ ನೀಡುವುದರಿಂದ ಬರುವ ಆದಾಯದಲ್ಲಿ ಶೇಕಡಾ 25 ರಷ್ಟು ಅಭಿವೃದ್ದಿ ಕಾರ್ಯಗಳಾದ ಸಿ.ಸಿ.ರಸ್ತೆ ನಿರ್ಮಾಣ, ಶಾಲೆಯ ಅಭಿವೃದ್ದಿ ಮುಂತಾದ ಕಾರ್ಯಗಳನ್ನು ಕೈಗೊಳ್ಳಲು ಅವಕಾಶವಾಗುತ್ತದೆ ಎಂದು ತಿಳಿಸಿದರು.

11. **ಶ್ರೀ ಗಾದಿಲಿಂಗಪ್ಪ, ಕರ್ಚೇಡು ಗ್ರಾಮ**-ರವರು ಮಾತನಾಡುತ್ತಾ, ಮರಳು ಗಣಿಗಾರಿಕೆ ತಮ್ಮ ಹಳ್ಳಿಯ ಸರ್ವೆ ನಂ. 191 ರಲ್ಲಿ ನಡೆಸಲು ಅನುಮತಿ ಕೊಡಲು ತೀರ್ಮಾನ ಮಾಡಿರುವುದು ಏಕೆಂದು ಪ್ರಶ್ನೆ ಮಾಡಿದರು. ವೇದಾವತಿ ನದಿಯ ಪಾತ್ರವು ದೊಡ್ಡದಿದ್ದು ಅಲ್ಲಿ ಎಲ್ಲಿಯಾದರು ಮರಳುಗಾರಿಕೆ ನಡೆಸಲು ಅನುಮತಿ ನೀಡುವಂತೆ ಕೋರಿದರು. ತಮ್ಮ ಗ್ರಾಮದವರು ಮರಳು ಗಣಿಗಾರಿಕೆಯಿಂದ ಜೀವನ ಸಾಗಿಸುತ್ತಿಲ್ಲ ಎಂದರು. ತಮ್ಮ ಗ್ರಾಮದಲ್ಲಿ ಎಲ್ಲರೂ ಕೂಲಿ ಕಾರ್ಮಿಕರು ಮತ್ತು ಸಣ್ಣ ರೈತರಿದ್ದು ಅವರನ್ನು ಬಗ್ಗು ಬಡಿದು ಇಲ್ಲಿ ಮರಳು ಗಣಿಗಾರಿಕೆಗೆ ಅವಕಾಶ ನೀಡುವುದರ ಹಿಂದಿನ ಉದ್ದೇಶವೇನು ಎಂದು ಪ್ರಶ್ನೆ ಮಾಡಿದರು. ತಮ್ಮ ಗ್ರಾಮದವರು ಹಗರಿ ದಡದಲ್ಲಿ ಕೃಷಿ ಚಟುವಟಿಕೆ ನಡೆಸುತ್ತಿದ್ದು ವೇದಾವತಿ ನೀರು ಬಿಟ್ಟಿರುವುದರಿಂದ ಎಲ್ಲವು ಹಾಳಾಗಿ ಸುಮಾರು 40-50 ಸಾವಿರಗಳಷ್ಟು ನಷ್ಟ ಅನುಭವಿಸಿದ್ದು ಯಾರೂ ಸಹ ನಷ್ಟವನ್ನು ಭರಿಸಿರುವುದಿಲ್ಲ ಎಂದು ತಿಳಿಸಿದರು. ಬದಕು ಕಟ್ಟಿಕೊಳ್ಳಲು ಹಳ್ಳಿಯಿಂದ ದಿಲ್ಲಿಯ ವರೆಗೆ ಹೋಗುವುದು ಸಾಮನ್ಯ ಆದರೆ ತಮ್ಮ ಗ್ರಾಮದಲ್ಲಿ ಅಭಿವೃದ್ದಿ ನೆಪದಲ್ಲಿ ದಿಲ್ಲಿಯಿಂದ ಹಳ್ಳಿಗೆ ಬಂದಿರುವುದು ವಿಪರ್ಯಾಸ ಎಂದರು. ಮರಳು ಗಣಿಗಾರಿಕೆಗೆ ಅಕ್ಕಪಕ್ಕದ ಗ್ರಾಮಗಳನ್ನು ಪರಿಗಣನೆಗೆ ತೆಗೆದುಕೊಳ್ಳದೇ ಕೇವಲ ತಮ್ಮ ಗ್ರಾಮವನ್ನು ಮಾತ್ರ ಮರಳು ಗಣಿಗಾರಿಕೆ ಆಯ್ಕೆ ಮಾಡಿರುವುದನ್ನು ಖಂಡಿಸಿದರು. ದಯಮಾಡಿ ಕರ್ಚೇಡು ಗ್ರಾಮದಲ್ಲಿ ಮರಳು ಗಣಿಗಾರಿಕೆಗೆ ಅವಕಾಶ ನೀಡದಂತೆ ಮನವಿ ಮಾಡಿದರು.

12. **ಶ್ರೀ ಕಾಳಪ್ಪ, ಹಿರೇಹಳ್ಳ ಗ್ರಾಮ ಪಂಚಾಯತಿ ಸದಸ್ಯರು**- ರವರು ಮಾತನಾಡುತ್ತಾ, ಸದರಿ ಪ್ರದೇಶದಲ್ಲಿ ಮರಳು ಗಣಿಗಾರಿಕೆಯನ್ನು ಈ ಮೊದಲು ಮಾಡಿದ್ದು ಈಗ ಏಕೆ ಅನುಮತಿ ನೀಡುವುದಿಲ್ಲ ಎಂದರು. ಇಲ್ಲಿ ಮರಳು ಗಣಿಗಾರಿಕೆಗೆ ಅವಕಾಶ ನೀಡುವುದರಿಂದ ಅಭಿವೃದ್ದಿ ಕಾರ್ಯಗಳನ್ನು ಕೈಗೆತ್ತಿಕೊಳ್ಳಲು ಅನುಕೂಲವಾಗುತ್ತದೆ ಎಂದರು.

13. **ಶ್ರೀ ಆದಿ ರುದ್ರಪ್ಪ, ಕರ್ಚೇಡು ಗ್ರಾಮ ಪಂಚಾಯತಿ ಉಪಾಧ್ಯಕ್ಷರು**- ರವರು ಮಾತನಾಡುತ್ತಾ, ತಮ್ಮ ಗ್ರಾಮದವರೆಲ್ಲರೂ ಮರಳು ಗಣಿಗಾರಿಕೆಗೆ ನಡೆಸುವುದು ಬೇಡ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದು ಪಂಚಾಯತಿ ಸದಸ್ಯರು ಅನುಮತಿ ನೀಡುವಂತೆ ಅಭಿಪ್ರಾಯ ಪಟ್ಟಿರುತ್ತಾರೆ. ಮರಳು ಗಣಿಗಾರಿಕೆಯಿಂದಲೇ ಪಂಚಾಯತಿ ಉದ್ಧಾರ ಆಗುವುದಿಲ್ಲ ಎಂದರು. ಮುಂದುವರೆದು ಮಾತನಾಡುತ್ತಾ, ತಾವು ತಮ್ಮ ಗ್ರಾಮದವರಿಂದ ಚುನಾಯಿತರಾಗಿದ್ದು ಅವರ ಅಭಿಪ್ರಾಯವೇ ತಮ್ಮ ಅಭಿಪ್ರಾಯ ಎಂದು ತಿಳಿಸಿದರು.

ಕೊನೆಯಲ್ಲಿ ಸಾರ್ವಜನಿಕ ಆಲಿಕೆ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಶ್ರೀ ಪಿ.ಎಸ್.ಮಂಜುನಾಥ, ಕ.ಆ.ಸೇ(ಹಿರಿಯ ಶ್ರೇಣಿ), ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ಬಳ್ಳಾರಿ ಇವರು ತಮ್ಮ ಅಧ್ಯಕ್ಷೀಯ ಮಾತುಗಳನ್ನಾಡುತ್ತ, ಸದರಿ ಸಭೆಯು ಪರಿಸರ ಸಾರ್ವಜನಿಕ ಸಭೆಯಾಗಿದ್ದು, ಇದರಲ್ಲಿ ಎಲ್ಲರಿಗೂ ಮಾತನಾಡಲು ಮುಕ್ತ ಅವಕಾಶವನ್ನು ಕಲ್ಪಿಸಲಾಗಿದೆ. ಹಾಗು ತಾವು ಮಾತನಾಡಿದ ಪರ/ವಿರೋಧ ಅಭಿಪ್ರಾಯಗಳನ್ನ ದಾಖಲಿಸಲಾಗಿದೆ. ಈ ಸಭೆಯಲ್ಲಿ ನಾವುಗಳು ಯಾವುದೇ ತಿರ್ಮಾನ ತೆಗೆದುಕೊಳ್ಳುವದಿಲ್ಲ, ಈ ಸಭೆಯ ಉದ್ದೇಶ ಸಾರ್ವಜನಿಕರ ಅಭಿಪ್ರಾಯ ಹಾಗೂ ಸಲ್ಲಿಸಿರುವ ಮೌಖಿಕ ಮತ್ತು ಲಿಖಿತ ಅಭಿಪ್ರಾಯಗಳನ್ನು ಸಂಗ್ರಹಿಸಿ, ಹಾಗೂ ತಾವುಗಳು ಸಲ್ಲಿಸಿರುವ ಮನವಿಗಳು, ಹೆಚ್ಚಿನ ಸಂಖ್ಯೆಯ ಲಿಖಿತ ಅಭಿಪ್ರಾಯಗಳು/ ಸಲಹೆಗಳು/ಆಕ್ಷೇಪಣೆಗಳನ್ನು ಸ್ವೀಕರಿಸಿದ್ದೇವೆ. ಅದನ್ನು ದಾಖಲಿಸಲಾಗುವುದು. ಈ ಸಭೆಯ ನಡವಳಿಯನ್ನು ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ದಾಖಲಿಸಿ, ಛಾಯಾಚಿತ್ರಗಳ (ಪ್ರತಿಯನ್ನು **ಅನುಬಂಧ-7** ರಲ್ಲಿ ಲಗತ್ತಿಸಲಾಗಿದೆ) ವಿಡಿಯೋ ಇರುವ ಸಿ.ಡಿ. ಗಳ (ಪ್ರತಿಯನ್ನು **ಅನುಬಂಧ-8** ರಲ್ಲಿ ಲಗತ್ತಿಸಲಾಗಿದೆ) ಇದನ್ನು ರಾಜ್ಯ ಮಟ್ಟದ ಪರಿಸರ ಅಘಾತ ಅಧ್ಯಯನ ಪ್ರಾಧಿಕಾರ, ಅರಣ್ಯ, ಜೀವಪರಿಸ್ಥಿತಿ ಮತ್ತು ಪರಿಸರ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು. ಇವರಿಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಕೇಂದ್ರ ಕಛೇರಿ ಬೆಂಗಳೂರು ಇವರು ಮುಖಾಂತರ ಕಳುಹಿಸಿಕೊಡಲಾಗುವದು ಎಂದು ತಿಳಿಸಿದರು.

ಈ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಂಡ ಎಲ್ಲಾ ಸಾರ್ವಜನಿಕರಿಗೆ ಮತ್ತು ಸುತ್ತಮುತ್ತಲಿನ ಗ್ರಾಮಸ್ಥರಿಗೆ ಧನ್ಯವಾದಗಳನ್ನು ತಿಳಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಿದರು.

ಶ್ರೀ ಕೆ.ರಾಜು
ಹಿರಿಯ ಪರಿಸರ ಅಧಿಕಾರಿ(ಪ್ರಭಾರ)
ಕ.ರಾ.ಮಾ.ನಿ.ಮಂ.ವಲಯ ಕಛೇರಿ

ಶ್ರೀ ಪಿ.ಎಸ್.ಮಂಜುನಾಥ,ಕ.ಆ.ಸೇ(ಹಿರಿಯ ಶ್ರೇಣಿ)
ಅಪರ ಜಿಲ್ಲಾಧಿಕಾರಿಗಳು ಹಾಗೂ
ಬಳ್ಳಾರಿಅಪರ ಜಿಲ್ಲಾ ದಂಡಾಧಿಕಾರಿಗಳು, ಅಧ್ಯಕ್ಷರು
ಜಿಲ್ಲಾ ಪರಿಸರ ಸಾರ್ವಜನಿಕ ಆಲಿಕೆ
ಸಮಿತಿ, ಬಳ್ಳಾರಿ.

## ಅನುಬಂಧ

1. ಪರಿಸರ ಸಾರ್ವಜನಿಕ ಆಲಿಕೆ ಸಭೆಗೆ ಭಾಗವಹಿಸಿದ ಅಧಿಕಾರಿಗಳ ಸಹಿ ಇರುವ ಹಾಜರಾತಿ ವಹಿಯ ಪ್ರತಿಯನ್ನು **ಅನುಬಂಧ-1** ರಲ್ಲಿ ಲಗತ್ತಿಸಲಾಗಿದೆ.

2. ಪರಿಸರ ಸಾರ್ವಜನಿಕ ಆಲಿಕೆ ಸಭೆಗೆ ಭಾಗವಹಿಸಿದ ಸಾರ್ವಜನಿಕರ ವಿಳಾಸ ಮತ್ತು ಸಹಿ ಇರುವ ಹಾಜರಾತಿ ವಹಿಯ ಪ್ರತಿಯನ್ನು **ಅನುಬಂಧ-2** ರಲ್ಲಿ ಲಗತ್ತಿಸಲಾಗಿದೆ.

3. ರಾಜ್ಯ ಮಟ್ಟದ ಪ್ರಮುಖ ದಿನ ಪತ್ರಿಕೆಗಳಾದ ವಿಜಯ ಕರ್ನಾಟಕ (ಕನ್ನಡ) ಹಾಗೂ ದಿ ಹಿಂದೂ (ಆಂಗ್ಲ) ಗಳಲ್ಲಿ ದಿನಾಂಕ:10-12-2021 ರಂದು ಪತ್ರಿಕಾ ಪ್ರಕಟಣೆ ಬಳ್ಳಾರಿ ಜಿಲ್ಲೆಯ ಸ್ಥಳೀಯ ದಿನಪತ್ರಿಕೆಯಾದ "ಕನ್ನಡ ನಾಡು" ಪತ್ರಿಕೆಯಲ್ಲಿ ದಿನಾಂಕ: 12-12-2021 ರಂದು ಪರಿಸರ ಸಾರ್ವಜನಿಕ ಆಲಿಕೆ ಸಭೆ ಕುರಿತಾದ ಪ್ರಕಟಣೆಯ ಪ್ರತಿಯನ್ನು **ಅನುಬಂಧ-3** ರಲ್ಲಿ ಲಗತ್ತಿಸಲಾಗಿದೆ.

4. ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಪ್ರಚಾರಕ್ಕಾಗಿ ದಿನಾಂಕ 07-01-2022 ರಂದು ಕರಪತ್ರಗಳನ್ನು ವಿತರಿಸಲಾದ ಮತ್ತು ಧ್ವನಿವರ್ಧಕಗಳ ಮುಖೇನ ಯೋಜನಾ ಸ್ಥಳದ ಸುತ್ತಮುತ್ತಲ ಗ್ರಾಮಗಳಲ್ಲಿ ಸಾರ್ವಜನಿಕವಾಗಿ ಪ್ರಚಾರ ಮಾಡಲಾದ ಸಮಯದಲ್ಲಿ ತೆಗೆದುಕೊಂಡ ಛಾಯಾಚಿತ್ರಗಳ ಪ್ರತಿಯನ್ನು **ಅನುಬಂಧ-5**ರಲ್ಲಿ ಲಗತ್ತಿಸಲಾಗಿದೆ.

5. ಮಾನ್ಯ ಜಿಲ್ಲಾಧಿಕಾರಿಗಳು, ಬಳ್ಳಾರಿ ರವರ ಅಧಿಕೃತ ಜ್ಞಾಪನಾ ಪತ್ರದ ದಿನಾಂಕ :07-01-2022 ರ ಅನ್ವಯ ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ಬಳ್ಳಾರಿ ರವರಿಗೆ ಅಧಿಕಾರ ನೀಡಿ ದಿನಾಂಕ : 10-01-2022 ರಂದು ನಡೆಯುವ ಪರಿಸರ ಆಲಿಕೆ ಸಭೆಯನ್ನು ನಡೆಸಲು ಆದೇಶಿಸಿರುತ್ತಾರೆ. ಸದರಿ ಜ್ಞಾಪನಾ ಪತ್ರದ ಪ್ರತಿಯನ್ನು ಅನುಬಂಧ-5 ರಂತೆ ಲಗತ್ತಿಸಿದೆ.

6. ಸಾರ್ವಜನಿಕರಿಂದ ಪ್ರಾದೇಶಿಕ ಕಛೇರಿ ಬಳ್ಳಾರಿಯಲ್ಲಿ ಸ್ವೀಕೃತಿಯಾದ ಒಟ್ಟು 0 ಲಿಖಿತ ಹೇಳಿಕೆ/ ಆಕ್ಷೇಪಣೆಗಳು ಸ್ವೀಕೃತಿಯಾಗಿದ್ದು, ಪರಿಸರ ಸಾರ್ವಜನಿಕ ಸಭೆಯ ಸಮಯದಲ್ಲಿ ಒಟ್ಟು 14 ಲಿಖಿತ ಹೇಳಿಕೆ/ ಆಕ್ಷೇಪಣೆಗಳುಸ್ವೀಕೃತಿಯಾಗಿರಯತ್ತವೆ ಅವುಗಳನ್ನು **ಅನುಬಂಧ-4** ರಲ್ಲಿ ಲಗತ್ತಿಸಲಾಗಿದೆ.

7. ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಪ್ರಕ್ರಿಯೆಯ ಛಾಯಾಚಿತ್ರಗಳ ಪ್ರತಿಯನ್ನು **ಅನುಬಂಧ-7** ರಲ್ಲಿ ಲಗತ್ತಿಸಲಾಗಿದೆ.

8. ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಆಡಿಯೋ ಮತ್ತು ವಿಡಿಯೋ ಇರುವ ಸಿ.ಡಿ. ಗಳ ಪ್ರತಿಯನ್ನು **ಅನುಬಂಧ-8** ರಲ್ಲಿ ಲಗತ್ತಿಸಲಾಗಿದೆ.

ಶ್ರೀ ಕೆ.ರಾಜು
ಹಿರಿಯ ಪರಿಸರ ಅಧಿಕಾರಿ(ಪ್ರಭಾರ)
ಕ.ರಾ.ಮಾ.ನಿ.ಮಂ.ವಲಯ ಕಛೇರಿ, ಬಳ್ಳಾರಿ

ಶ್ರೀ ಪಿ.ಎಸ್.ಮಂಜುನಾಥ, ಕ.ಆ.ಸೇ(ಹಿರಿಯ ಶ್ರೇಣಿ)
ಅಪರ ಜಿಲ್ಲಾಧಿಕಾರಿಗಳು ಹಾಗೂ
ಅಪರ ಜಿಲ್ಲಾ ದಂಡಾಧಿಕಾರಿಗಳು, ಅಧ್ಯಕ್ಷರು
ಜಿಲ್ಲಾ ಪರಿಸರ ಸಾರ್ವಜನಿಕ ಆಲಿಕೆ ಸಮಿತಿ, ಬಳ್ಳಾರಿ.